ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚೆಕ್‌ಪೋಸ್ಟ್‌ಗಳ ಸಂಖ್ಯೆ

94- ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡದಲ್ಲಿ ಇರುವ ಕಮರ್ಷಿಯಲ್ ಚೆಕ್‌ಪೋಸ್ಟ್‌ಗಳ ಸಂಖ್ಯೆ ಎಷ್ಟು? ಅವು ಎಲ್ಲೆಲ್ಲಿ ಇವೆ (ವಿವರ ನೀಡುವುದು)

ಆ) ಆ ಚೆಕ್‌ಪೋಸ್ಟ್‌ಗಳಲ್ಲಿ ಅನೇಕ ಕಡೆ ಭ್ರಷ್ಟಾಚಾರ ನಡೆಯುತ್ತಿದೆ ಎಂಬ ದೂರು ಸರ್ಕಾರಕ್ಕೆ ಬಂದಿದೆಯೇ?

ಇ) ಮುಕ್ತ, ತೊಗೊಟು ಚೆಕ್‌ಪೋಸ್ಟ್‌ಗಳಲ್ಲಿ ಅನ್ಯಾಯ ನಡೆಯುತ್ತಿದ್ದು, ತಪಾಸಣೆ ಇಲ್ಲದೆ ಲಾರಿಗಳನ್ನು, ಸರಕುಗಳನ್ನು, ಚೆಕ್‌ಪೋಸ್ಟ್‌ಗಳಲ್ಲಿ ಕಳುಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಇದನ್ನು ನಿಲ್ಲಿಸಲು ಕಠಿಣ ತಪಾಸಣೆ ಮಾಡಲಾಗುವುದೇ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):

ಅ) 8 (ವಿವರಗಳನ್ನು ಲಗತ್ತಿಸಿದೆ)

ಆ) ಯಾವುದೇ ನಿರ್ದಿಷ್ಟ ದೂರು ಬಂದಿಲ್ಲ.

ಇ) ಇಲ್ಲ

ಈ) ಅವಶ್ಯಕವಿರುವ ನಿಗಾವನ್ನು ವಹಿಸಲಾಗುತ್ತಿದೆ.

ರಹದಾರಿ ಇಲ್ಲದೆ ನಡೆಯುವ ಖಾಸಗೀವಾಹನಗಳಿಂದ ಸಾರಿಗೆಸಂಸ್ಥೆಗೆ ನಷ್ಟ.

47-ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಹದಾರಿ ಇಲ್ಲದೆ ಖಾಸಗಿ ವಾಹನಗಳು ರಾಜ್ಯದಲ್ಲಿ ಓಡಾಡುತ್ತಿರುವುದರಿಂದ ಸಾರಿಗೆ ಸಂಸ್ಥೆಯ ಆದಾಯಕ್ಕೆ ಧಕ್ಕೆ ತಗಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ರಹದಾರಿಯಿಲ್ಲದ ವಾಹನಗಳ ಸುಳಿವು ಸಿಕ್ಕಿದರೂ ಸರ್ಕಾರ ಕ್ರಮ ಕೈಗೊಳ್ಳದೆ ಇರುವುದು ನಿಜವಲ್ಲವೆ?

ಇ) ಆದರಿಂದ ಅನಾವಶ್ಯಕವಾಗಿ ಖಾಸಗಿಯವರಿಗೆ ಲಾಭ ಮಾಡಲು ನೆರವು ನೀಡಿದಂತಾಗುವುದಿಲ್ಲವೇ?

ಈ) ರಹದಾರಿ ಇಲ್ಲದ ಖಾಸಗಿ ಬಸ್ಸುಗಳನ್ನು ಮತ್ತು ಅಂತಹ ವಾಹನಗಳನ್ನು ಕೂಡಲೇ ರದ್ದುಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವುದೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):

ಅ) ಇಲ್ಲ

ಆ) ಇಲ್ಲ

ಇ) ಇಲ್ಲ

ಈ) ರಹದಾರಿ ಇಲ್ಲದೆ ಓಡಾಡುವ ಖಾಸಗಿ ವಾಹನಗಳ ನೊಂದಣಿ ಪುಸ್ತಕವನ್ನು ಅಮಾನತ್ತುಪಡಿಸುವ ಕ್ರಮವನ್ನು ತೆಗೆದುಕೊಳ್ಳುವುದಲ್ಲದೆ ಅಭಿಯೋಜನೆ ಕ್ರಮವನ್ನೂ ಕೈಗೊಳ್ಳಲಾಗುತ್ತಿದೆ.